# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ






ಸಂಪುಟ : 38 ಸಂಚಿಕೆ : 12 ದುರ್ಮುಖಿ–ಮಾಘ ಕಲಿಯುಗಾಬ್ದ 5118 1–2–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಜಲ್ಲಿಕಟ್ಟು ಉಳಿವಿಗಾಗಿ ಕಟಿಬದ್ಧವಾಗಲಿ ಭಾರತ



ಪ್ರಾಣಿದಯಾ ಸಂಘಗಳಾದ AWBI(Animal Welfare Board of India), PETA (People for Ethical Treatment of Animals), HSI (Human Society International) ಮತ್ತು PFA (People for Animals) ನಂತಹ ಅನೇಕ ಸಂಘಟನೆಗಳು ಕಳೆದ ದಶಕದಿಂದ ಮಂಡಿಸುತ್ತಿರುವ ವಾದಕ್ಕೆ ದೇಶದ ಸರ್ವೋಚ್ಚ ನ್ಯಾಯಾಲಯವು ಒಪ್ಪಿಗೆ ಸೂಚಿಸಿದ್ದರಿಂದ ತಮಿಳುನಾಡಿನ ಸಾಂಪ್ರದಾಯಿಕ ಕ್ರೀಡೆ 'ಜಲ್ಲಿಕಟ್ಟು' ಇಂದು ನಿಷೇಧಕ್ಕೊಳಗಾಗಿದೆ. ಮೇ 2014ರಲ್ಲಿ ಜಲ್ಲಿಕಟ್ಟು ನಡೆಸುವುದು ನಿಷೇಧಕ್ಕೊಳಗಾದಾಗಿನಿಂದ ನಿಷೇಧವನ್ನು ತೆರವುಗೊಳಿಸಬೇಕು, ಅದಕ್ಕಾಗಿ ಕಾನೂನು ರೂಪಿಸಬೇಕು ಇತ್ಯಾದಿಯಾಗಿ ಕೂಗು ತಮಿಳುನಾಡಿನ ಜನಮಾನಸದಲ್ಲಿ ಕೇಳುತ್ತಿದ್ದರೂ ಈ ವರ್ಷ ಪೊಂಗಲ್ ಹಬ್ಬದ ಸಮಯದಲ್ಲಿ ಅದು ತೀವ್ರ ಪ್ರತಿಭಟನೆಯ ರೂಪ ಪಡೆದುಕೊಂಡಿದೆ. ತಮಿಳುನಾಡಿನ ಹೊರಗೂ ವ್ಯಾಪಿಸಿರುವ ಜಲ್ಲಿಕಟ್ಟುವಿನ ಪರವಾದ ಧ್ವನಿಗೆ ಸೆಲೆಬ್ರಿಟಿಗಳೂ ಸೇರಿದಂತೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ. ನಿಷೇಧ ತಮಿಳುನಾಡಿನ ಸಂಪ್ರದಾಯ ಸಂಸ್ಕೃತಿಗಳ ಮೇಲೆ ಹೊಡೆತ ಎಂದು ತಮಿಳಿಗರು ಅದರಲ್ಲೂ ಕಾಲೇಜು ವಿದ್ಯಾರ್ಥಿಗಳು ಯುವಕರು ಬೀದಿಗಿಳಿದಿದ್ದಾರೆ. ಆದರೆ ಜಲ್ಲಿಕಟ್ಟುವಿನ ನಿಷೇಧದ ವಿಷಯ ಹೊರನೋಟಕ್ಕೆ ಕಾಣುವಂತೆ ಕೇವಲ ಸಾಂಸ್ಕೃತಿಕ ಅಥವಾ ಐತಿಹಾಸಿಕ ಆಚರಣೆಗಳಿಗಷ್ಟೇ ಸೀಮಿತಗೊಂಡಿಲ್ಲ. ಕೃಷಿಪ್ರಧಾನ ರಾಜ್ಯವೊಂದರ ಪರಂಪರಾಗತ ಗೋಆಧಾರಿತ ಕೃಷಿಪದ್ಧತಿ ಹಾಗೂ ತಾನು ಸಾಕಿದ ದನಗಳ ಸಾಮರ್ಥ್ಯವನ್ನೇ ನೆಚ್ಚಿಕೊಂಡು ವ್ಯವಸಾಯವನ್ನೇ ಅವಲಂಬಿಸಿರುವ ರೈತನ ಜೀವನದ ಸಾಮಾಜಿಕ, ಆರ್ಥಿಕತೆಯ ಬದಿಗಳನ್ನೂ ಪ್ರಭಾವಿಸಬಲ್ಲ ಪ್ರಶ್ನೆಯಾಗಿದೆ. ಅಷ್ಟೇ ಅಲ್ಲದೆ ಸ್ಥಳೀಯ ಗೋತಳಿಗಳ ಅಳಿವು–ಉಳಿವಿನಿಂದಾಗಿ ಜೀವಸಂಕುಲದ ವೈವಿಧ್ಯವನ್ನೇ ಬಾಧಿಸಬಲ್ಲ ಬಹು ಆಯಾಮಿ ಪ್ರಶ್ನೆಗಳನ್ನೂ ಹೊತ್ತುಕೊಂಡು ಸಂಕೀರ್ಣ ಸ್ವರೂಪಪಡೆದುಕೊಂಡಿದೆ.

### ಏನಿದು ಜಲ್ಲಿಕಟ್ಟು ?

ತಮಿಳಿನಲ್ಲಿ ಏರುತಳುವಲ್, ಮಂಜುವಿರಟ್ಟು, ಕನ್ನಡದಲ್ಲಿ ಗೂಳಿಕಾಳಗ ಎಂದು ಕರೆಸಿಕೊಳ್ಳುವ ಈ ಕ್ರೀಡೆ ತಮಿಳುನಾಡಿನ ಸಾಂಪ್ರದಾಯಿತ ಜನಜೀವನದ ಅದರಲ್ಲೂ ಸುಗ್ಗಿಕಾಲ ಪೊಂಗಲ್ ಅಥವಾ ಸಂಕ್ರಾಂತಿಯ ಭಾಗ. ಮೊದಲು ಕೇವಲ ಗ್ರಾಮೀಣ ಪ್ರದೇಶಗಳಿಗ ಸೀಮಿತವಾಗಿದ್ದ ಈ ಕ್ರೀಡೆ ಇಂದು ಪಟ್ಟಣಗಳಿಗೂ ಹಬ್ಬಿದೆ. ಐದು ಸಾವಿರ ವರ್ಷಗಳಿಗೂ ಹಿಂದೆಯೂ ಇದ್ದಿತ್ತೆಂದು ಗುರುತಿಸಲಾಗುವ ಗೂಳಿಕಾಳಗದ ಕುರುಹುಗಳನ್ನು ಸಿಂಧೂನದಿ ವ್ಯಾಪ್ತಿಯ ನಾಗರಿಕತೆಯಲ್ಲೂ ಪತ್ತೆಮಾಡಲಾಗಿದ್ದು ಅವುಗಳನ್ನು ದೆಹಲಿಯ ರಾಷ್ಟ್ರೀಯ ವಸ್ತುಪ್ರದರ್ಶನಾಲಯದಲ್ಲಿ ಇರಿಸಲಾಗಿದೆ. ಕ್ರಿ.ಪೂ. 400 ರಿಂದ ಕ್ರಿ.ಪೂ. 100ರ ಕಾಲದ ತಮಿಳು ಶಾಸ್ತ್ರೀಯ ಯುಗದಲ್ಲೇ ಈ ಆಟ ಚಾಲ್ತಿಯಲ್ಲಿತ್ತು ಎಂಬುದಕ್ಕೆ ಆಧಾರಗಳಿವೆ. ಆಟದಲ್ಲಿ ಭಾಗಿಯಾಗುವ ಆರೋಗ್ಯವಂತ ತಳಿಯ ಶಕ್ತಿಯುತ ಹೋರಿಗಳೊಂದಿಗೆ ಆಟಗಾರರ ಶಕ್ತಿ–ಸಾಮರ್ಥ್ಯಗಳನ್ನೂ, ಧೈರ್ಯ, ಚಾಣಾಕ್ಷತೆಗಳನ್ನೂ ಒರೆಗೆ ಹಚ್ಚುವ ವಿನೋದವಾಗಿ ಮತ್ತು ಬಹುಮಾನದ ರೂಪದಲ್ಲಿ ಹಣವನ್ನು ಹಾಗೂ ಸಮಾಜದಲ್ಲಿ ಗೌರವವನ್ನೂ ಗಳಿಸಿಕೊಡುವ ಕಾರಣದಿಂದ ಕ್ರಮೇಣ ತಮಿಳುನಾಡಿನಾದ್ಯಂತ ಜನಪ್ರಿಯವಾಗಿದೆ.


*2ನೇ ಪುಟಕ್ಕೆ*




### ಕಂಬಳ ತಡೆಯಾಜ್ಞೆ ತೆರವುಗೊಳಿಸಿ

ಕರ್ನಾಟಕದ ಕರಾವಳಿಯ ಸಾಂಪ್ರದಾಯಿಕ ಆಚರಣೆಯಾ ಕಂಬಳ ಕೂಡಾ ಈ ಸ್ವಘೋಷಿತ ಪ್ರಾಣಿ ದಯಾ ಸಂಘಟನೆಗಳ ಕೆಂಗಣ್ಣಿಗೆ ತುತ್ತಾಗಿ ಹೈಕೋರ್ಟ್ ತಡಯಾಜ್ಞೆ ನೀಡಿದೆ. ಇದನ್ನು ತೆರವುಗೊಳಿಸುವಂತೆ ಕೋರಿ ಈಗಾಗಲೇ ಕಾನೂನು ಸಮರ ನಡೆಯುತ್ತಿದೆ. ಕಂಬಳ ಕೇವಲ ಮನೋರಂಜನೆಯ ಕ್ರೀಡೆಯಲ್ಲ, ಇದಕ್ಕೆ ಐತಿಹಾಸಿಕ, ಧಾರ್ಮಿಕ ಹಿನ್ನೆಲೆಯೂ ಇದೆ. ಇದು ಏಕಕಾಲಕ್ಕೆ ಸಾಮಾಜಿಕ ಕಾರ್ಯಕ್ರಮವೂ ಹೌದು, ಧಾರ್ಮಿಕ ವಿಧಿವಿಧಾನಗಳನ್ನು ಮತ್ತು ತುಳುನಾಡಿನ ನೆಲಮಟ್ಟದ ಸಂವೇದನೆಗಳನ್ನು ಜನರಿಗೆ ನೆನಪಿಸುವ ಸಾಂಸ್ಕೃತಿಕ ಹಬ್ಬವೂ ಹೌದು. ಈ ಅಂಶವನ್ನು ಗಣನೆಗೆ ತೆಗೆದುಕೊಂಡು ಕಂಬಳಕ್ಕೆ ಅನುವು ಮಾಡಿಕೊಡಬೇಕು ಎಂದು ಒಕ್ಕೊರಲ ಒತ್ತಾಯ ಕೇಳಿಬರುತ್ತಿದೆ. ಬಕ್ರೀದ್ ಸಂದರ್ಭದಲ್ಲಿ ಧಾರ್ಮಿಕ ಹಕ್ಕಿನ ಆಧಾರದಲ್ಲಿ ಕುರಿ–ಆಡು ಕೊಲ್ಲಲು ಅವಕಾಶ ನೀಡುವ ನಾವು, ಬಹುಸಂಖ್ಯಾತರ ಈ ನೆಲದ ಸಾಂಸ್ಕೃತಿಕ ಮೌಲ್ಯಗಳಿಗೂ ಬೆಲೆ ನೀಡಬೇಕಲ್ಲವೇ ಎಂಬುದು ಅನೇಕ ಪ್ರಜ್ಞಾವಂತರ ವಾದ.

## ಪಠ್ಯಪುಸ್ತಕ ಪರಿಷ್ಕರಣೆ : ಶಿಕ್ಷಣ ತಜ್ಞರ ವಿರೋಧ

ದೇಶವೊಂದರ ಭವಿಷ್ಯ ಹೇಗಿರಬಹುದೆಂದು ಊಹಿಸಲು ಇಂದಿನ ಮಕ್ಕಳಿಗೆ ನಾವು ಕೊಡುತ್ತಿರುವ ಶಿಕ್ಷಣವನ್ನು ನೋಡಿದರೆ ಸಾಕು. ಅದು ಜಪಾನ್ ಇರಬಹುದು ಅಥವಾ ಜರ್ಮನಿಯಿರಬಹುದು. ಅಲ್ಲಿನ ಸಮಾಜ ತಮ್ಮ ದೇಶ–ಧರ್ಮದ ಬಗ್ಗೆ ಹೆಮ್ಮೆಯನ್ನು ಹೊಂದಿದ್ದರೆ, ಬಲಿಷ್ಠ ದೇಶವೊಂದನ್ನು ಕಟ್ಟಿ ನಿಲ್ಲಿಸಿದ್ದರೆ ಅದಕ್ಕೆ ಕಾರಣ ಅಲ್ಲಿನ ಶಿಕ್ಷಣ ವ್ಯವಸ್ಥೆ.

ಹಾಗೆಯೇ, ನಮ್ಮ ದೇಶದಲ್ಲಿ ಆತ್ಮಾಭಿಮಾನವಿಲ್ಲದ ಸಮಾಜವಿದ್ದರೆ, ರಾಷ್ಟ್ರನಿರ್ಮಾಣದಲ್ಲಿ ತಮ್ಮ ಕರ್ತವ್ಯವನ್ನು ಮರೆತು ಸ್ವಾರ್ಥದಲ್ಲೇ ಮುಳುಗಿರುವ ಸಮಾಜದ ಭಾಗವೊಂದಿದ್ದರೆ ಅದಕ್ಕೂ ಕಾರಣ ನಮ್ಮ ಶಿಕ್ಷಣ ವ್ಯವಸ್ಥೆಯೇ. ಬ್ರಿಟಿಷರು ಬಿಟ್ಟುಹೋದ ಬಳುವಳಿಗಳಲ್ಲಿ ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆಯೂ ಒಂದು. ಕೇವಲ ಬ್ರಿಟಿಷ್ ಸಾಮ್ರಾಜ್ಯಕ್ಕೆ ಬೇಕಾದ ಕಾರಕೂನರನ್ನು ತಯಾರು ಮಾಡಲು ರೂಪುಗೊಂಡ ಈ ಶಿಕ್ಷಣ ಪದ್ಧತಿಯನ್ನು ಇನ್ನೂ ನಾವು ಬದಲಿಸದಿರುವುದು ನಮ್ಮ ಸರ್ಕಾರಗಳ ಬೇಜವಾಬ್ದಾರಿತನಕ್ಕೆ ಮತ್ತು ಗುಲಾಮೀ ಮಾನಸಿಕತೆಗೆ ಸಾಕ್ಷಿ.

ಇಂದು ನಮ್ಮ ಕರ್ನಾಟಕದಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆಯ ಚರ್ಚೆ ನಡೆಯುತ್ತಿದೆ. ಶಿಕ್ಷಣತಜ್ಞ ಜಿ. ಎಸ್. ಮೂಡಂಬಡಿತ್ತಾಯ ಅವರ ನೇತೃತ್ವದ ತಜ್ಞರ ಸಮಿತಿ ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲೆ ಪರಿಷ್ಕರಿಸಿದ್ದ ಪಠ್ಯಪುಸ್ತಕಗಳನ್ನು ಇಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬದಲಿಸಲು ಹೊರಟಿದೆ. ಅದರ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲಿದೆ.

- 2015 ರಲ್ಲೇ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಪಠ್ಯಪುಸಕ ಪರಿಷ್ಕರಣಾ ಸಮಿತಿ ರಚಿಸಲಾಯಿತು. 1 ರಿಂದ 10 ನೇ ತರಗತಿವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆ ಇದರ ಉದ್ದೇಶವಾಗಿತ್ತು.
- 2016 ರ ಕೊನೆವರೆಗೂ ಈ ಸಮಿತಿ ಯಾವುದೇ ಮಧ್ಯಾಂತರ ವರದಿ ನೀಡಲಿಲ್ಲ. ಡಿಸೆಂಬರ್‌ನಲ್ಲಿ ಹಾಲಿ ಪಠ್ಯಪುಸ್ತಕ ಮರುಮುದ್ರಣಕ್ಕೆ ಸಿದ್ಧತೆ ನಡೆಯುತ್ತಿರುವಾಗ ಎಚ್ಚರಗೊಂಡ ಬರಗೂರು ರಾಮಚಂದ್ರಪ್ಪ ಸಮಿತಿ ಇನ್ನು ಎರಡೇ ತಿಂಗಳಲ್ಲಿ ಪರಿಷ್ಕೃತ ಪಠ್ಯಪುಸ್ತಕಗಳನ್ನು ನೀಡುವುದಾಗಿ ಹೇಳಿತು.
- 2017–18 ನೇ ಶೈಕ್ಷಣಿಕ ವರ್ಷದಿಂದ ಹೊಸ ಪಠ್ಯಪುಸ್ತಕವನ್ನು ಜಾರಿಗೆ ತರಬೇಕೆನ್ನುವುದು ಸಮಿತಿಯ ಆಗ್ರಹವಾಗಿದ್ದರೆ, ತಯಾರಿಗೆ ಸಮಯ


*4ನೇ ಪುಟಕ್ಕೆ*




*1ನೇ ಪುಟದಿಂದ...*

## ಜಲ್ಲಿಕಟ್ಟು ಉಳಿವಿಗಾಗಿ ಕಟಿಬದ್ಧವಾಗಲಿ ಭಾರತ

ತಮಿಳುನಾಡಿನ ಗ್ರಾಮಗಳಲ್ಲಿ ಜಲ್ಲಿಕಟ್ಟು ಕ್ರೀಡೆಗೆಂದೇ ಶುದ್ಧ ಭಾರತೀಯ ತಳಿಯಾದ ಕಂಗೆಯಂ ಜಾತಿಯ ಗೂಳಿಗಳನ್ನು (ಬೋಸ್ ಇಂಡಿಕಸ್ ತಳಿ) ಸಾಕಲಾಗುತ್ತದೆ. ವರ್ಷವಿಡೀ ಅನುಭವಿ ರೈತರ ದೇಖರೇಖಿಯಲ್ಲಿ ದಷ್ಟಪುಷ್ಟವಾಗಿ ಆರೋಗ್ಯವಂತವಾಗಿ ಬೆಳೆಸಲ್ಪಡುವ ಈ ಗೂಳಿಗಳು ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿ ಬೆಲೆಬಾಳುವಂಥವು. ಬಲಿಷ್ಠ ಗೂಳಿಯ ಮಾಲಿಕರಿಗೂ ಊರಿನ ಮಿತ್ರವರ್ಗದಲ್ಲಿ ವಿಶೇಷ ಗೌರವವಿದೆ. ಬಹುತೇಕ ಗ್ರಾಮಗಳಲ್ಲಿ ವಿಶೇಷ ವಿಧಿವಿಧಾನಗಳೊಂದಿಗೆ ಜಲ್ಲಿಕಟ್ಟು ಗೂಳಿಗಳನ್ನು ಗ್ರಾಮದ ದೇವಸ್ಥಾನದ ವತಿಯಿಂದಲೇ ಸಾಕಲಾಗಿರುತ್ತದೆ. ಅದು ದೇವರ ಪ್ರಾಣಿಯೆಂದೂ ಊರಿನ ಎಲ್ಲ ಸಾಕುಪ್ರಾಣಿಗಳ ಪ್ರತಿನಿಧಿಯಂತೆ ಗ್ರಾಮಸ್ಥರು ಅದಕ್ಕೆ ವಿಶೇಷ ಗೌರವವನ್ನು ಕೊಡುತ್ತಾರೆ.

ಪೌಷ್ಟಿಕ ಆಹಾರ ಮತ್ತು ಉತ್ತಮ ಆರೈಕೆಯಲ್ಲಿ ಬೆಳೆಯುವುದರಿಂದ ಇಂತಹ ಗೂಳಿಗಳಿಂದ ಕೃಷಿಕಾರ್ಯಗಳಿಗೆ ಸಮರ್ಥವಾದ ಮತ್ತು ನೈಸರ್ಗಿಕವಾಗಿ ರೋಗನಿರೋಧಕ ಶಕ್ತಿಯುಳ್ಳ ಸಶಕ್ತ ಎತ್ತುಗಳನ್ನು ಹಾಗೆಯೇ ಒಳ್ಳೆಯ ಗುಣಮಟ್ಟದ ಹಾಲನ್ನು ಕರೆಯುವಂತಹ ಗೋ ಸಂತತಿಯನ್ನು ಬೆಳೆಸಲು ಸಾಧ್ಯವಾಗುತ್ತದೆ. ಹೋರಿಯ ಸಂಪೂರ್ಣ ಜವಾಬ್ದಾರಿಯನ್ನು ಗ್ರಾಮದ ಸಮುದಾಯವೇ ಹೊತ್ತಿರುವುದರಿಂದ ಸಣ್ಣ ಮತ್ತು ಮಧ್ಯಮವರ್ಗದ ರೈತರಿಗೆ ತಮ್ಮ ಹಸುಗಳ ಸಂತಾನಾಭಿವೃದ್ಧಿಗೆ ಹೆಚ್ಚಿನ ಖರ್ಚಿನ ಅಗತ್ಯವಿಲ್ಲದಿರುವುದು ಈ ಪದ್ಧತಿಗಳ ಮತ್ತೊಂದು ವಿಶೇಷ. ಜಲ್ಲಿಕಟ್ಟುವಿನಂತಹ ವರ್ಷಕ್ಕೊಮ್ಮೆ ನಡೆಯುವ ಕ್ರೀಡೆಯ ರೂಪದ ಆಚರಣೆಗಳು ಪ್ರತಿಯೊಂದು ತಳಿಯ ವೈಶಿಷ್ಟ್ಯವನ್ನು ತಲೆಮಾರುಗಳಿಂದ ಕಾಪಿಡುವಲ್ಲಿ ಸಹಾಯಕವಾಗಿವೆ. ಹಾಗೆಯೇ, ರೈತ ಮತ್ತು ರಾಸುಗಳ ನಡುವೆ ಭಾವಾನಾತ್ಮಕ ಸಂಬಂಧವನ್ನು ಬೆಸೆಯುವಲ್ಲಿಯೂ ಸಹಾಯಕವಾಗುತ್ತವೆ.

**ಹಾಗಾದರೆ ವಿವಾದವೇಕೆ?** ಲಕ್ಷ ಲಕ್ಷ ಸಂಖ್ಯೆಯ ಆರೋಗ್ಯವಂತ ದನಗಳು ಪಿಂಕ್ ರೆವೊಲ್ಯುಶನ್ ಹೆಸರಿನಲ್ಲಿ ಕಸಾಯಿಖಾನೆಗಳಿಗೆ ಸೇರಿ ಹಲಾಲ್ ಮಾಂಸವಾಗುತ್ತಿದ್ದರೂ ಸುಮ್ಮನಿದ್ದು ಕ್ರೀಡೆಯಲ್ಲಿ ಪಾಲ್ಗೊಳ್ಳುವ ಗೂಳಿಗಳನ್ನು ಅಮಾನುಷವಾಗಿ ನಡೆಸಿಕೊಳ್ಳಲಾಗುತ್ತಿದೆ ಅವುಗಳನ್ನು ಹಿಂಸಿಸಲಾಗುತ್ತದೆ ಎಂದು ಬೊಬ್ಬೆ ಹಾಕಿ ನಿಷೇಧಕ್ಕೆ ಒತ್ತಾಯಿಸುವುದರ ಹಿಂದಿನ ಕಾರಣವೇನು?

### ರಾಸಾಯನಿಕ ಗೊಬ್ಬರ ಮತ್ತು ವಿದೇಶಿ ಡೈರಿ ಕಂಪನಿಗಳ ಕುತಂತ್ರ

ಮನುಷ್ಯನ ಆರೋಗ್ಯಕ್ಕೆ ಪೋಷಕವಾಗುವಂತಹ ಎ2 ದರ್ಜೆಯ ವಂಶವಾಹಿಗಳನ್ನು ಹೊಂದಿರುವ ಹಾಲನ್ನು ಮಾತ್ರ ಉತ್ಪಾದಿಸುವುದು ದೇಶೀತಳಿಯ ಹಸುಗಳ ಹೆಗ್ಗಳಿಕೆ. ಇಂದಿಗೂ ನಮ್ಮ ದೇಶದ ಗ್ರಾಮಗಳ ಮನೆಮನೆಗಳ ಕೊಟ್ಟಿಗೆಗಳಲ್ಲಿರುವುದು ಭಾರತೀಯ ತಳಿಯ ಹಸುಗಳೇ. ಅವು ನೀಡುವ ಹಾಲು ಮನೆಬಳಕೆಗೆ ಸಾಕಾದರೆ ಸಗಣಿ ಗೊಬ್ಬರ ಬೇಸಾಯಕ್ಕಾಗುತ್ತದೆ. ಇದರಿಂದ ಹೆಚ್ಚಿನ ಗ್ರಾಮಗಳು ಡೈರಿಯ ಹಾಲು ಮತ್ತು ಕಂಪನಿಯ ರಾಸಾಯನಿಕ ಗೊಬ್ಬರಗಳ ಮೇಲೆ ಅವಲಂಬಿತವಾಗಿಯೇ ಇಲ್ಲ. ಇಂತಹ ಗೋಸಂತತಿಯ ಸಂವರ್ಧನೆಗೆ ಜಲ್ಲಿಕಟ್ಟುವಿನಂತಹ ಆಚರಣೆಗಳು ಪೂರಕವಾಗಿರುತ್ತವೆ. ಆದರೆ ಜನರ ಮನಸ್ಸಿನಲ್ಲಿ ಅನಗತ್ಯ ಗೊಂದಲಮೂಡಿಸಿ ಇಂತಹ ಆಚರಣೆಗಳಿಂದ ವಿಮುಖರನ್ನಾಗಿಸಿದಲ್ಲಿ ದೇಶೀ ತಳಿಗಳನ್ನೇ ನಂಬಿ ಬದುಕುವ ರೈತರ ಕುಟುಂಬಗಳೂ ಇಲ್ಲವಾಗುತ್ತವೆ. ಬೇಡಿಕೆ ಮತ್ತು ಪೂರೈಕೆಯ ವರ್ತುಲವನ್ನು ಭೇದಿಸುವಲ್ಲಿ ಒಮ್ಮೆ ಸಫಲರಾದರೆ ಸಾಕು, ಡೈರಿ ಕಂಪನಿಗಳ ಲಾಭಕ್ಕೆ ಎಣೆಯೇ ಇಲ್ಲವಾಗುತ್ತದೆ. ವಿಶ್ವದಲ್ಲೇ ಅತ್ಯಧಿಕ ಹಾಲು ಉತ್ಪಾದಿಸುವ ದೇಶಗಳಲ್ಲಿ ಒಂದಾಗಿರುವ ಭಾರತ ವಿದೇಶಿ ಹೈಬ್ರೀಡ್ ತಳಿಯ ಹಸುಗಳ ಹಾಲಿಗೆ ಬಾಯೊಡ್ಡಿ ತನ್ನ ಆರೋಗ್ಯ ಮತ್ತು ಹಣ ಎರಡನ್ನೂ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಎದುರಾಗುತ್ತದೆ. ರಾಸುಗಳು ಹೆಚ್ಚಿದ್ದಷ್ಟು ರೈತನಿಗೆ ರಾಸಾಯನಿಕ ಗೊಬ್ಬರದ ಬೇಡಿಕೆ ಇರುವುದಿಲ್ಲ. ತನ್ನ ಕೃಷಿಗೆ ಬೇಕಾದ ಗೊಬ್ಬರವನ್ನು ಆತ ಮನೆಯಲ್ಲೇ ಸಂಗ್ರಹಿಸಬಲ್ಲ. ಆದರೆ ಅಂತಹ ಉಚಿತ ಗೊಬ್ಬರದ ಮೂಲವಾಗಿರುವ ರಾಸುಗಳನ್ನೇ ಇಲ್ಲವಾಗಿಸಿದಲ್ಲಿ ರೈತನಿಗೆ ರಾಸಾಯನಿಕಗಳ ಮೊರೆಹೋಗದೆ ಗತ್ಯಂತರವಿಲ್ಲ.

### ಬಹುರಾಷ್ಟ್ರೀಯ ಕಂಪನಿಗಳ ಹುನ್ನಾರ

ಬಹುರಾಷ್ಟ್ರೀಯ ಕಂಪನಿಗಳು ಪ್ರಯೋಗಾಲಯದಲ್ಲಿ ಕೃತಕವಾಗಿ ಅಭಿವೃದ್ಧಿಪಡಿಸಿದ ಹೈಬ್ರೀಡ್ ಹಸುಗಳ ಮಾರಾಟಕ್ಕಾಗಿ ಭಾರತದ ಕೃಷಿ ಮಾರುಕಟ್ಟೆಯ ಮೇಲೆ ಕಣ್ಣಿಟ್ಟಿವೆ. ಅವುಗಳ ಲಾಭಕೋರತನಕ್ಕೆ ಅಡ್ಡಿಯಾಗಿರುವುದು ದೇಶೀತಳಿಯ ಹಸುಗಳ ಬೆಳವಣಿಗೆಗೆ ಪೂರಕವಾಗಿರುವ ಜಲ್ಲಿಕಟ್ಟುವಿನಂತಹ ಆಚರಣೆಗಳು. ಇಂತಹ ಪದ್ಧತಿಗಳು ಕಡಿಮೆಯಾಗುತ್ತಿರುವಂತೆ ದೇಶೀದನಗಳ ಸಂಖ್ಯೆಯೂ ಕುಸಿಯುತ್ತವೆ ಮತ್ತು ಇದರ ನೇರ ಲಾಭ ಬಹುರಾಷ್ಟ್ರೀಯ ಕಂಪನಿಗಳ ಪಾಲಾಗುತ್ತದೆ. ಇದೊಂದು ಮೂಢನಂಬಿಕೆ, ಪ್ರಾಣಿಗಳ ಮೇಲೆ ಹಿಂಸಾಚಾರವೆಂದು ಹುಯಿಲೆಬ್ಬಿಸುವುದರಿಂದ ಇಂತಹ ಆಚರಣೆಗಳ ಪೂರ್ವಾಪರ ಪರಿಚಯವಿಲ್ಲದವರಲ್ಲಿ ವಿಶೇಷವಾಗಿ ಗ್ರಾಮೀಣ ಹಿನ್ನೆಲೆಯಿಲ್ಲದ ನಗರಸ್ಥರ ಮನಸ್ಸಿನಲ್ಲಿ ಗೊಂದಲಗಳನ್ನು ಬಿತ್ತುವುದು ಸುಲಭವಾಗುತ್ತದೆ. ಇಂತಹ ಸಾಂಪ್ರದಾಯಿಕ ಆಚರಣೆಗಳು ಲುಪ್ತಗೊಳ್ಳುತ್ತಿರುವದರಿಂದ 137ರಷ್ಟಿದ್ದ ವಿವಿಧ ದೇಶೀ ಹಸು-ಹೋರಿ ತಳಿಗಳ ಸಂಖ್ಯೆ ಇಂದಿಗೆ 37ಕ್ಕೆ ಕುಸಿದಿದೆ. ತಮಿಳುನಾಡೊಂದರಲ್ಲೇ ಇಂದಿಗೆ ಉಳಿದಿರುವುದು ಐದು ಗೋತಳಿಗಳು ಮಾತ್ರ.

### ಮೋಟಾರು ಟ್ರಾಕ್ಟರ್ ಹಾಗೂ ಕಸಾಯಿಖಾನೆಗಳ ಷಡ್ಯಂತ್ರ

ತಲತಲಾಂತರಗಳಿಂದ ಕಷ್ಟಸಹಿಷ್ಣುತೆ ಮತ್ತು ಸಾಮರ್ಥ್ಯಗಳಿಂದ ರೈತನ ನಂಬಿಕಸ್ಥ ಪಾಲುದಾರರಾಗಿರುವ ದೇಶೀ ಸಂತತಿಯ ಎತ್ತುಗಳಿಂದಾಗಿ ಪರೋಕ್ಷವಾಗಿ ನಷ್ಟ ಹೊಂದುತ್ತಿರುವುದು ಮೋಟಾರು ಕಂಪನಿಗಳು. ಇಂತಹ ಕಷ್ಟ ಜೀವಗಳ ಸಂತತಿಯೇ ಇಲ್ಲವಾದ ಮೇಲೆ ಅನಿವಾರ್ಯವಾಗಿ ರೈತನಿಗೆ ಮೋಟಾರು ಪಂಪ್ ಮತ್ತು ಟ್ರಾಕ್ಟರ್ ಕಂಪನಿಗಳ ಮೇಲೆ ಅವಲಂಬಿಸಬೇಕಾಗುತ್ತದೆ.

ಪ್ರಾಣಿದಯಾ ಸಂಘಗಳ ಮುಖವಾಡದಲ್ಲಿ ದೇಶೀ ತಳಿಗಳ ಅಭಿವೃದ್ಧಿಯನ್ನು ತಡೆಯುತ್ತಿರುವಲ್ಲಿ ಮುಖ್ಯಪಾತ್ರ ಕಸಾಯಿ ಖಾನೆಗಳದ್ದೂ ಇದೆ. ಜಲ್ಲಿಕಟ್ಟು, ಕಂಬಳದಂತಹ ಆಚರಣೆಗಳು ಇಲ್ಲದ ಪ್ರದೇಶಗಳಲ್ಲಿ ಗಂಡುಕರುಗಳು ನೇರವಾಗಿ ಕಸಾಯಿಖಾನೆಗೇ ಸೇರುತ್ತವೆ. ಹೀಗಾಗಿಯೇ ಇಂದು ಭಾರತ ವಿಶ್ವದಲ್ಲೇ ಅತಿ ಹೆಚ್ಚು ಮಾಂಸದ ಉತ್ಪಾದಕವಾಗಿ ಕುಖ್ಯಾತಿಗಳಿಸಿದೆ. ದೇಸಿತಳಿಯ ಎಳೆಗರುಗಳ ಮಾಂಸಕ್ಕೆ ಮಧ್ಯಪ್ರಾಚ್ಯ, ಯೂರೋಪ್ ಸಮೇತ ವಿಶ್ವದಲ್ಲೆಲ್ಲ ಅತಿಯಾದ ಬೇಡಿಕೆಯಿರುವುದನ್ನು ಇಲ್ಲಿ ಗಮನಿಸಬಹುದು.

ಮೊದಲೇ ಸಾಕಷ್ಟು ಸ್ಥಳೀಯ ಗೋತಳಿಗಳನ್ನು ಕಳೆದುಕೊಂಡಿರುವ ನಾವು ಇಂತಹ ಆಚರಣೆಗಳ ನಿಷೇಧದಿಂದಾಗಿ ಇರುವ ಗೋಸಂತತಿಯನ್ನೂ ಕಳೆದುಕೊಳ್ಳುವ ಹಂತಕ್ಕೆ ಮುಟ್ಟುವ ಮುನ್ನ ಪರಿಹಾರೋಪಾಯಗಳನ್ನು ಹುಡುಕಲೇಬೇಕು. ಅದಕ್ಕೆ ಕೃಷಿಕೇಂದ್ರಿತ ಗ್ರಾಮೀಣ ಜನಜೀವನ ಹಾಗೂ ಬೇಸಾಯ ಪದ್ಧತಿಗಳ ಪರಿಚಯವಿಲ್ಲದವರ ಮತ್ತು ಸ್ಥಳೀಯ ಜೀವಸಂಕುಲದ ವೈವಿಧ್ಯ ಹಾಗು ಉಳಿವಿನ ಅರಿವಿಲ್ಲದ ತಥಾಕಥಿತ ಪ್ರಾಣಿದಯಾಸಂಘಗಳ ಅನಗತ್ಯ ಕೂಗಾಟಗಳಿಗೆ ಕಿವಿಗೊಡದೆ, ಏಕನಿಷ್ಠೆಯಿಂದ ಗೋಸಂತತಿಯ-ಗೋಪಾಲಕರ ಉಳಿವಿಗೆ ಮತ್ತು ಸಂವರ್ಧನೆಗೆ ಸಮರ್ಪಕವಾಗಿರುವ ಸ್ಥಳೀಯ ಆಚರಣೆಗಳನ್ನು ಪ್ರೋತ್ಸಾಹಿಸಲೇಬೇಕು.

**ಹೆಸರು:** ಗಿರ್

**ಮೂಲ:** ಗುಜರಾತಿನ ಗಿರ್ ಗುಡ್ಡಗಾಡು

**ರೂಪ:** ಸಾಮಾನ್ಯವಾಗಿ ಕಂದು ಬಣ್ಣ, ಅಗಲವಾದ ಮುಖ, ಭಾರಿ ಮೈಕಟ್ಟು, 'ಅ' ಆಕಾರದಂತಹ ಕೋಡುಗಳು, ಉದ್ದನೆಯ ಜೋತು ಬೀಳುವ ಕಿವಿಗಳು, ಸೌಮ್ಯ ಸ್ವಭಾವ.

**ವಿಶೇಷತೆ:** ಬ್ರೆಜಿಲ್, ವೆನೆಝುವೆಲಾ ದೇಶಗಳಲ್ಲಿಯೂ ಹೊಂದಿಕೊಂಡಿವೆ. ಅಲ್ಲಿಯೂ ದಿನಕ್ಕೆ ಸುಮಾರು 60 ಲೀಟರ್ ಹಾಲು ಕೊಡುತ್ತದೆ

**ಹಾಲುಣಿಸುವಿಕೆ:** ಕಾಲಾವಧಿಯಲ್ಲಿ ಸರಾಸರಿ 3000 ಕೆಜಿ



## ಆದ್ಯ ಕ್ರಾಂತಿಕಾರಿ ವಾಸುದೇವ್ ಬಲವಂತ್ ಫಡ್ಕೆ

ವಾಸುದೇವ ಬಲವಂತ ಫಡ್ಕೆ (4 ನವೆಂಬರ್ 1845–17 ಫೆಬ್ರುವರಿ 1883) ಭಾರತದ ಅಪ್ರತಿಮ ಕ್ರಾಂತಿಕಾರಿ ನಾಯಕರು, ಧೀರ ಜನನಾಯಕ ಮತ್ತು ಶಿಕ್ಷಣಪ್ರೇಮಿ.

ಬ್ರಿಟಿಷರ ಕ್ರೂರ ಆಡಳಿತದಲ್ಲಿ ರೈತ ಸಮುದಾಯದ, ಜನಸಾಮಾನ್ಯರ ಸಂಕಷ್ಟಗಳನ್ನು ನೋಡಿ ಸ್ವರಾಜ್ಯವೊಂದೇ ಇದಕ್ಕೆಲ್ಲ ಪರಿಹಾರ ಎಂದು ಮನಗಂಡರು. ಸ್ವರಾಜ್ಯಪ್ರಾಪ್ತಿಗೆ ಪ್ರಾಣಾರ್ಪಣೆಯೇ ಪರಮ ಉಡುಗೊರೆ ಎಂದು ಹೋರಾಡುತ್ತಲೇ ವೀರಸ್ವರ್ಗ ಸೇರಿದ ವೀರಾಗ್ರಣಿ.

ವಾಸುದೇವರ ಜನನ ಮಹಾರಾಷ್ಟ್ರದ ಶಿರಡೋಣದಲ್ಲಾಯಿತು. ಅವರದ್ದು ಬಾಲ್ಯದಿಂದಲೇ ಕುದುರೆ ಸವಾರಿ, ಈಜು, ಕುಸ್ತಿಗಳಲ್ಲಿ ಪಳಗಿದ ದೇಹ. ತಾರುಣ್ಯಕ್ಕೆ ಪುಣೆಯಲ್ಲಿ ಅಂದಿನ ಬ್ರಿಟಿಷ್ ಸರ್ಕಾರದ ಸೇನಾ ಕಾರಕೂನರಾಗಿ ಕೆಲಸಕ್ಕೆ ಸೇರಿದರು.



ಪುಣ್ಯತಿಥಿ
ಫೆಬ್ರುವರಿ
17

ತಾಯಿಯ ಅಂತಿಮ ದರ್ಶನಕ್ಕೆ ಅವಕಾಶ ನೀಡದ ಬ್ರಿಟಿಷ್ ಅಧಿಕಾರಿಗಳ ವರ್ತನೆಯಿಂದ ಕ್ರುದ್ಧರಾದ ಫಡ್ಕೆ ನೌಕರಿಗೆ ತಿಲಾಂಜಲಿ ನೀಡಿ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಉಗ್ರ ಭಾಷಣಗಳ ಮೂಲಕ ಜನಜಾಗೃತಿ ಮೂಡಿಸತೊಡಗಿದರು. 1880ರ ದಶಕದ ಭೀಕರ ಬರಗಾಲದಲ್ಲಿ ದೇಶದ ಜನತೆ ತತ್ತರಿಸುತ್ತಿದ್ದರೆ ಅದನ್ನು ದುರ್ಲಕ್ಷ್ಯ ಮಾಡಿದ್ದ ಆಂಗ್ಲ ಆಡಳಿತದ ವೈಖರಿಗೆ ನೊಂದು ತಾವೇ ಜನರ ನೆರವಿಗೆ ಧಾವಿಸಿದರು.

ಋಜುಮಾರ್ಗಕ್ಕೆ ಆಂಗ್ಲಸರ್ಕಾರ ಜಗ್ಗದು ಎಂದರಿತ ವಾಸುದೇವ ಸಶಸ್ತ್ರ ಕ್ರಾಂತಿಗೆ ಮೊದಲಾದರು. ಪುಣೆ, ಮುಂಬೈ ನಗರದ ಶ್ರೀಮಂತರಿಂದ ಅವರ ಹೋರಾಟಕ್ಕೆ ಯಾವುದೇ ಬೆಂಬಲ ಸಿಗಲಿಲ್ಲ. ನಂತರ ಆಗಿನ ಮಹಾರಾಷ್ಟ್ರದ ತಥಾಕಥಿತ ಹಿಂದುಳಿದ ಜನರಲ್ಲಿ ಅವರಿಗೆ ಆಶಾಕಿರಣ ಕಂಡಿತು. ರಾಮೋಷಿ, ಕೋಳಿ, ಧನ್ಗರ್‌ನಂತಹ ಅನೇಕ ಹಿಂದುಳಿದ ವರ್ಗಗಳ ಜನರು ಅವರ ಪರಮ ಸಮರ್ಥಕರಾದರು. ಈ ಸಮಾಜದ ಅನೇಕ ತರುಣರನ್ನು ಒಟ್ಟುಗೂಡಿಸಿ ಶಸ್ತ್ರಸಜ್ಜಿತ ಸೇನೆಕಟ್ಟಿ ಬ್ರಿಟಿಷರ ವಿರುದ್ಧ ರಣಕಹಳೆ ಮೊಳಗಿಸಿದರು.

ಬ್ರಿಟಿಷ್ ಸರ್ಕಾರ ಇವರನ್ನು ಹಿಡಿಯಲು ಬಹುಮಾನ ಘೋಷಿಸಿದರೆ ಬದಲಾಗಿ ಫಡ್ಕೆಯವರೂ ಬ್ರಿಟಿಷ್ ಅಧಿಕಾರಿಯ ತಲೆ ತೆಗೆದವರಿಗೆ ಇನ್ನೂ ಹೆಚ್ಚಿನ ಬಹುಮಾನ ಘೋಷಿಸಿದರು. ದುರ್ದೈವವಶಾತ್ ಹೋರಾಟದ ಹಾದಿಯಲ್ಲಿರುವಾಗಲೇ ಶತ್ರುಪಾಳಯಕ್ಕೆ ಸಿಕ್ಕು ಬಂಧಿಗಳಾಗಿ ದೂರದ ಏಡನ್ನಿನಲ್ಲಿ ಆಜೀವ ಕಾರಾವಾಸದ ಶಿಕ್ಷೆಗೆ ಗುರಿಯಾದರು. ಜೈಲುಮುರಿದು ಪರಾರಿಯಾಗುವ ಪ್ರಯತ್ನ ನಡೆಸಿ, ಮತ್ತೆ ಸಿಕ್ಕಿಬಿದ್ದಾಗ ಉಪವಾಸ ಸತ್ಯಾಗ್ರಹ ಕೈಗೊಂಡರು. ಬಂಧನದಲ್ಲಿರುವಾಗಲೇ ಆಮರಣ ಉಪವಾಸ ನಡೆಸಿ 17 ಫೆಬ್ರವರಿ 1883ರಂದು ಸ್ವರ್ಗವಾಸಿಗಳಾದರು.

**ಸಂಪಾದಕೀಯ ಸಹಕಾರ** ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ಸತ್ಯನಾರಾಯಣ ಶಾನಭಾಗ್, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್




## ಮಾನಸಾ ಮೆಂದು

ಗಾಳಿಯಿಂದ ಹಾಗೂ ಸೂರ್ಯನ ಶಾಖದಿಂದ ವಿದ್ಯುತ್ ತಯಾರಿಸಬಹುದು ಎಂಬುದು ಜನಜನಿತ. ಆದರೆ ಗಿಡಮರಗಳ ಎಲೆಯ ಮೂಲಕವೂ ವಿದ್ಯುತ್ ಉತ್ಪಾದನೆ ಮಾಡಬಹುದು ಎಂದು 14ರ ಹರೆಯದ ಭಾರತೀಯ ಮೂಲದ ಮಾನಸಾ ಮೆಂದು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ.

ಅಮೆರಿಕದ ಒಹಿಯೊ ಪಟ್ಟಣದ ವಿಲಿಯಂ ಮಾಷನ್ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಾನಸಾಗೆ ಕಳೆದ ಬೇಸಿಗೆ ರಜೆಯಲ್ಲಿ ಭಾರತಕ್ಕೆ ಬಂದಿದ್ದಾಗ ಈ ಯೋಚನೆ ಹೊಳೆಯಿತಂತೆ. ಸಸ್ಯಗಳು ಸೂರ್ಯನ ಶಾಖ ಅಥವಾ ಕಿರಣಗಳ ಮೂಲಕ ಪತ್ರಹರಿತ್ತಿನ ಸಹಾಯದಿಂದ ಆಹಾರ ಉತ್ಪಾದನೆ ಮಾಡಿಕೊಳ್ಳುತ್ತವೆ. ಅಂದರೆ ಇಲ್ಲಿ ಶಕ್ತಿಯ ಬಳಕೆಯಾಗುತ್ತದೆ. ಇದೇ ಶಕ್ತಿಯನ್ನು ಏಕೆ ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಬಾರದು ಎಂಬ ಆಲೋಚನೆ ಮಾನಸಾರಲ್ಲಿ ಹೊಳೆಯಿತು. ಇದನ್ನು ಶಿಕ್ಷಕರೊಂದಿಗೆ ಚರ್ಚಿಸಿ, ಗಾಳಿ, ಸಸ್ಯಗಳ ಎಲೆಗಳು ಮತ್ತು ಸೂರ್ಯನ ಶಾಖದಿಂದ ವಿದ್ಯುತ್ ಉತ್ಪಾದನೆ ಮಾಡುವ ಪ್ರಾಯೋಗಿಕ ಪ್ರಾತ್ಯಕ್ಷಿಕೆ ಮತ್ತು ಪ್ರಬಂಧ ಸಿದ್ಧಪಡಿಸಿದರು. ಭವಿಷ್ಯದ ಇಂಧನ ಕ್ರಮತೆಗಾಗಿ ಹೊಸ ಹೊಸ ಆಲೋಚನೆ ಮತ್ತು ಸಂಶೋಧನೆಗಳಿಗೆ ಅಮೆರಿಕದ ವಿಜ್ಞಾನ ಕಾಂಗ್ರೆಸ್ ನಡೆಸುವ ಯುವ ವಿಜ್ಞಾನಿ ಸ್ಪರ್ಧೆಗೆ ಈ ಮಾದರಿಯನ್ನು ಕಳುಹಿಸಿದರು. ಯೋಜನೆಯನ್ನು ಮೆಚ್ಚಿದ ಅಮೆರಿಕದ ಹಿರಿಯ ವಿಜ್ಞಾನಿಗಳು ಯುವ ವಿಜ್ಞಾನಿ ಸ್ಪರ್ಧೆಯಲ್ಲಿ ಮೊದಲ ಬಹುಮಾನ (16 ಲಕ್ಷ ರೂ.) ನೀಡಿ ಗೌರವಿಸಿದರು.

ದೇಶದ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕನಿಷ್ಠ ಒಂದರಂತೆ ಪ್ರಧಾನಮಂತ್ರಿ ಭಾರತೀಯ ಜನಔಷಧ ಕೇಂದ್ರ ಆರಂಭಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕಡಿಮೆ ದರದಲ್ಲಿ ಜೆನರಿಕ್ ಔಷಧ ಒದಗಿಸುವ ಈ ಕೇಂದ್ರಗಳು ಬಡತನ ರೇಖೆಗಿಂತ ಕೆಳಗಿರುವ ರಾಷ್ಟ್ರದ ಶೇ 40ರಷ್ಟು ಜನರ ಆರೋಗ್ಯ ರಕ್ಷಣೆಗೆ ನೆರವಾಗಲಿವೆ. ಭಾರತೀಯ ವೈದ್ಯಕೀಯ ಮಂಡಳಿ ಜತೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಎಲ್ಲ ವೈದ್ಯರೂ ಜೆನರಿಕ್ ಔಷಧ ಸೂಚಿಸುವುದನ್ನು ಕಡ್ಡಾಯ ಮಾಡಲಾಗುವುದು ಎಂದು ಸರ್ಕಾರ ತಿಳಿಸಿದೆ. 2008ರಲ್ಲೇ ಆರಂಭವಾಗಿರುವ ಈ ಕೇಂದ್ರಗಳ ಸಂಖ್ಯೆಯನ್ನು ಈಗಾಗಲೇ 99 ರಿಂದ 750ಕ್ಕೆ ಹೆಚ್ಚಿಸಲಾಗಿದೆ. ಈ ವರ್ಷದ ಮಾರ್ಚ್ ವೇಳೆಗೆ 3,000 ಕೇಂದ್ರಗಳನ್ನು ಆರಂಭಿಸಲು ನಿರ್ಧರಿಸಿದೆ.

## ಶೌಚಾಲಯ ನಿರ್ಮಾಣ, ನಗದುರಹಿತ ಮದುವೆ!

ಗಂಡನ ಮನೆಯಲ್ಲಿ ಶೌಚಾಲಯ ನಿರ್ಮಾಣದ ಜೊತೆಗೆ ಸಂಪೂರ್ಣ ನಗದುರಹಿತವಾಗಿ ಮದುವೆ ಮಾಡುವ ಮೂಲಕ ಜೆಮ್‌ಶೆಡ್‌ಪುರ ವಿಶೇಷ ಮದುವೆಯೊಂದಕ್ಕೆ ಸಾಕ್ಷಿಯಾಯಿತು. ಝಾರ್ಖಂಡ್‌ನ ಜೆಮ್ಶೆಡ್‌ಪುರ ಸಮೀಪದ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಇತಿಹಾಸ ಎಂಬ ಗ್ರಾಮದ ಸುನೀತಾ ಹಾಗೂ ಪೂರ್ವ ಸಿಂಗ್‌ಭೂಮ್ ಜಿಲ್ಲೆಯ ಬಡಿಯಾ ಗ್ರಾಮದ ಸುಭಾಷ್ ನಾಯಕ್ ಅವರ ವಿವಾಹವನ್ನು ಹಿರಿಯರು ನಿಶ್ಚಯಿಸಿದ್ದರು. ಗಂಡನ ಮನೆಯಲ್ಲಿ ಶೌಚಾಲಯವಿಲ್ಲದಿರುವುದನ್ನು ಗಮನಿಸಿದ ಸುನೀತಾ ಶೌಚಾಲಯಕ್ಕೆ ಪಟ್ಟುಹಿಡಿದರು. ಕೊನೆಗೆ ಸುನೀತಾರ ಕುಟುಂಬದವರೆಲ್ಲ ಸೇರಿಕೊಂಡು ವರನ ಮನೆಯಲ್ಲಿ ರಾತ್ರೋರಾತ್ರಿ ಶೌಚಾಲಯ ಕಟ್ಟಿದರು. ಇದನ್ನು ಗಮನಿಸಿದ ಜಿಲ್ಲಾಧಿಕಾರಿಗಳು ಮದುವೆ ಸಂಪೂರ್ಣ ನಗದುರಹಿತವಾಗಿರಲಿ ಎಂದು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಕುಟುಂಬಸ್ಥರು ಮದುವೆಗೆ ಬೇಕಾದ ಬಾಡಿಗೆ, ತರಕಾರಿ, ದಿನಸಿ ಸಾಮಾಗ್ರಿಗಳು ಹಾಗೂ ಆಭರಣಗಳು ಸೇರಿದಂತೆ ಎಲ್ಲವನ್ನೂ ಕಾರ್ಡ್ ಮೂಲಕ ಖರೀದಿಸಿದ್ದಾರೆ. ಪುರೋಹಿತರ ದಕ್ಷಿಣೆಯನ್ನು ಚೆಕ್ ಮೂಲಕ ಪಾವತಿಸಲಾಗಿದೆ. ಉಡುಗೊರೆಗಳನ್ನು ಸಹ ಚೆಕ್ ಮತ್ತು ಆನ್‌ಲೈನ್ ಮೂಲಕ ಕೋರಿದರು.

# ಸಾಲುದ್ದದ ಸುದ್ದಿಗಳು



ಗುಜರಾತ್‌ನ್ನು ಮಾದರಿಯಾಗಿಟ್ಟುಕೊಂಡು ವಿಜಯಪುರದಲ್ಲಿ ಕೈಗೊಂಡ ಸೌರಶಕ್ತಿ ಯೋಜನೆ ಈಗ ದೇಶಕ್ಕೇ ಮಾದರಿಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಬಿಸಿಲಿನ ತೀವ್ರತೆ ಹೆಚ್ಚು. ಇದರಿಂದ ನೀರಿನ ಆವಿಯಾಗುವಿಕೆ ಪ್ರಮಾಣವೂ ಜಾಸ್ತಿ. ಇದರ ತಡೆಗೆ ಕಾಲುವೆ ಮೇಲೆ ಸೌರಫಲಕ ಅಳವಡಿಕೆಗೆ ಮುಂದಾಗಿದ್ದು, ಈ ಮೂಲಕ ನೀರನ್ನು ಉಳಿಸುವ ಜತೆಗೆ ವಿದ್ಯುತ್ ಉತ್ಪಾದಿಸುವ ಹೊಸ ಮಾದರಿಗೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಂದಾಗಿದೆ. ಈ ಯೋಜನೆಯಡಿ ಆಲಮಟ್ಟಿ ಬಲದಂಡೆ ಕಾಲುವೆ ಮೇಲೆ 8ನೇ ಕಿ.ಮೀ.ನಿಂದ 11ನೇ ಕಿ.ಮೀ. ವರೆಗೆ ಸೌರಫಲಕ ಅಳವಡಿಸಲಾಗಿದೆ. ಈ ಕಾಲುವೆಗಳ ಮೇಲೆ 3280 ಸೌರಫಲಕಗಳನ್ನು ಅಳವಡಿಸಲಾಗಿದೆ. ಈ ಸೌರಫಲಕಗಳಿಂದ ಪ್ರತಿನಿತ್ಯ 4000–6000 ಯೂನಿಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಗರಿಷ್ಠ 10ಸಾವಿರ ಯುನಿಟ್‌ನಷ್ಟು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಈ ಯೋಜನೆಗಿದೆ. 2015ರ ಜೂ. 9ರಂದು ಈ ಯೋಜನೆಗೆ ಚಾಲನೆ ನೀಡಲಾಗಿದ್ದು, ಈವರೆಗೆ 14 ಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲಾಗಿದೆ.



ಕೇಂದ್ರಾಡಳಿತ ಪ್ರದೇಶ ಸಹಿತ 36 ರಾಜ್ಯಗಳಲ್ಲಿರುವ 1.5 ಕೋಟಿ ಕಡುಬಡವರಿಗೆ ಪ್ರಧಾನಮಂತ್ರಿ ಉಜ್ವಲ ಯೋಜನಾ ಅಡಿಯಲ್ಲಿ ಗ್ಯಾಸ್ ಸಂಪರ್ಕ ಕಲ್ಪಿಸಲಾಗಿದೆ. ಮಹಿಳೆಯರನ್ನು ಉರುವಲಿನಿಂದ ಮುಕ್ತಗೊಳಿಸುವ ಉದ್ದೇಶದಿಂದ ಪ್ರಧಾನಿ ಮೋದಿ ಬಜೆಟ್‌ನಲ್ಲಿ 8 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದರು. 8 ತಿಂಗಳ ಹಿಂದೆ ಜಾರಿಗೊಳಿಸಿದ ಈ ಯೋಜನೆಯಲ್ಲಿ ಸಾಮಾಜಿಕ ಆರ್ಥಿಕ ಜಾತಿ ಸಮೀಕ್ಷೆ ಆಧಾರದ ಮೇಲೆ ಬಿಪಿಎಲ್ ಕಾರ್ಡ್ ಹೊಂದಿರುವ ಬಡವರನ್ನು ಗುರುತಿಸಲಾಗಿದೆ. ಇವರಿಗೆ ಠೇವಣಿರಹಿತವಾಗಿ ಅನಿಲ ಸಂಪರ್ಕ ಹಾಗೂ 1,600 ರೂ. ಆರ್ಥಿಕ ಸಹಾಯ ಕಲ್ಪಿಸಲಾಗಿದೆ.



ಧರ್ಮದ ಆಧಾರದ ಮೇಲೆ ಮತ ಕೇಳುವುದು ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ 7 ನ್ಯಾಯಮೂರ್ತಿಗಳ ಪೀಠ, ಧರ್ಮ, ಜಾತಿ, ಸಮುದಾಯ, ಭಾಷೆ ಹೆಸರಿನಲ್ಲಿ ಮತ ಕೇಳುವುದು ಜನಪ್ರತಿನಿಧಿ ಕಾಯ್ದೆಯ ಉಲ್ಲಂಘನೆ ಹಾಗೂ ಸಂವಿಧಾನದ ಜಾತ್ಯತೀತ ಆಶಯಗಳಿಗೆ ವಿರುದ್ಧವಾಗಿದೆ. ಇದು ಸಂವಿಧಾನದ ಆಶಯಕ್ಕೂ ಧಕ್ಕೆ ತರುತ್ತದೆ. ಧರ್ಮದ ಆಚರಣೆ ಹಾಗೂ ಪ್ರಚಾರಕ್ಕೆ ಪ್ರತಿಯೊಬ್ಬ ಭಾರತೀಯರಿಗೂ ಹಕ್ಕಿದೆ. ಆದರೆ ಇದನ್ನು ಚುನಾವಣೆಯಲ್ಲಿ ಬಳಸಿಕೊಳ್ಳುವಂತಿಲ್ಲ ಎಂದು ತಿಳಿಸಿದೆ. 1995ರಲ್ಲಿ ಸುಪ್ರೀಂಕೋರ್ಟ್ 'ಹಿಂದುತ್ವ ಎಂಬುದು ಜೀವನ ಕ್ರಮ. ಅದು ಮತವಲ್ಲ' ಎಂಬ ಮಹತ್ವದ ತೀರ್ಪು ನೀಡಿತ್ತು. ಹಿಂದುತ್ವದ ಹೆಸರಲ್ಲಿ ಮತ ಕೇಳುವುದು ಕಾನೂನುಬಾಹಿರವಲ್ಲ ಎಂದು ತಿಳಿಸಿತ್ತು. 1995ರ ಈ ತೀರ್ಪನ್ನು ಪುನರ್ ಪರಿಶೀಲಿಸುವುದನ್ನು ತಿರಸ್ಕರಿಸಿದ ಸುಪ್ರೀಂಕೋರ್ಟ್, ಚುನಾವಣೆಗೆ ಸಂಬಂಧಿತ ವಿಚಾರಗಳ ಕುರಿತು ಮಾತ್ರ ವಿಚಾರಣೆ ನಡೆಸುವುದಾಗಿ ತಿಳಿಸಿತ್ತು.

ವಿವಾದಾತ್ಮಕ ಧರ್ಮಗುರು ಝಾಕಿರ್ ನಾಯ್ಕ್ ಅವರಿಗೆ ಸೇರಿದ 78 ಬ್ಯಾಂಕ್ ಖಾತೆ ಹಾಗೂ ಮುಂಬೈ ಸುತ್ತಮುತ್ತ ಝಾಕಿರ್ ಮತ್ತು ಸಹಚರರು 100 ಕೋಟಿ ಮೌಲ್ಯದ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿರುವುದನ್ನು ರಾಷ್ಟ್ರೀಯ ತನಿಖಾ ದಳ (ಎನ್ಐಎ) ಪತ್ತೆ ಮಾಡಿದೆ. ಈ ಕುರಿತು ಸದ್ಯದಲ್ಲೇ ವಿಚಾರಣೆ ನಡೆಸುವ ಸಾಧ್ಯತೆಯಿದೆ. ಝಾಕಿರ್ ಮತ್ತು ಇತರರ ವಿರುದ್ಧ ಧರ್ಮದ ಆಧಾರದ ಮೇಲೆ ವಿವಿಧ ಗುಂಪುಗಳ ನಡುವೆ ವೈರತ್ವ ಸೃಷ್ಟಿಸಿದ ಆರೋಪದ ಮೇಲೆ ಎನ್ಐಎ ನವೆಂಬರ್‌ನಲ್ಲಿ ಭಯೋತ್ಪಾದನೆ ಪಡೆ ಕಾನೂನಿನಡಿ ಪ್ರಕರಣ ದಾಖಲಿಸಿದೆ. ಝಾಕಿರ್ ಒಡೆತನದ ಸುಮಾರು 23 ಸಂಸ್ಥೆಗಳು ಈ ಕೃತ್ಯದಲ್ಲಿ ಭಾಗಿಯಾಗಿವೆ ಎಂದು ಎನ್ಐಎ ಆರೋಪಿಸಿದೆ.



## ಸೆಲೆಬ್ರಿಟಿಗಳಲ್ಲ ಸದ್ದಿಲ್ಲದ ಸಾಧಕರು

### ನಿಚುಟೆ ಡೌಲೊ

ಕೆಲ ಪ್ರತ್ಯೇಕತಾವಾದಿ ಉಗ್ರರ ಜತೆ ಸೇರಿಕೊಂಡು ಸೇನೆಯ ಜತೆ ಸದಾ ಸಂಘರ್ಷ ನಡೆಸುತ್ತಿರುವ ಯುವಕರಿಗೆ ಒಂದು ನೆಲೆ ಕಲ್ಪಿಸಬೇಕು ಎಂಬ ಹಂಬಲ ಅವರದಾಗಿತ್ತು. ಈ ನಿಟ್ಟಿನಲ್ಲಿ ಮುಂದಡಿ ಇಟ್ಟು, ಈಶಾನ್ಯ ಭಾರತದ 15 ಸಾವಿರಕ್ಕೂ ಹೆಚ್ಚು ಯುವಕರಿಗೆ ಉದ್ಯೋಗ ಕಲ್ಪಿಸಿಕೊಟ್ಟ ಸಾಧಕ ನಿಚುಟೆ ಡೌಲೊ ಅವರ ಯಶಸ್ವಿ ಸಾಧನೆಯ ಕಥೆ ಇದು. ಇವರ ಅಮೂಲ್ಯ ಸಾಧನೆಗೆ ಅಂತರರಾಷ್ಟ್ರೀಯ ಸಂಸ್ಥೆಯಾದ ಜ್ವಬ್ ಫೌಂಡೇಶನ್ 2016ನೇ ಸಾಲಿನ 'ಸಾಮಾಜಿಕ ವಾಣಿಜ್ಯೋದ್ಯಮಿ' ಎಂಬ ಪುರಸ್ಕಾರ ನೀಡಿ ಗೌರವಿಸಿದೆ.

40ರ ಹರೆಯದ ನಿಚುಟೆ ಡೌಲೊ ನಾಗಾಲ್ಯಾಂಡ್‌ನವರು. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸ್ಥಳೀಯ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ವೃತ್ತಿಜೀವನ ಆರಂಭಿಸಿದರು. ಈ ವೃತ್ತಿ ಅವರಿಗೆ ತೃಪ್ತಿ ತರಲಿಲ್ಲ! ಇಂದಿನ ಯುವ ಜನರನ್ನು ನಿರುದ್ಯೋಗದಿಂದ ಪಾರು ಮಾಡಿ ಅವರಿಗೆ ಉದ್ಯೋಗದ ದಾರಿ ತೋರಬೇಕು ಎಂಬುದು ನಿಚುಟೆ ಡೌಲೊ ಅವರ ಹಂಬಲ ಮತ್ತು ಗುರಿಯೂ ಆಗಿತ್ತು. ಅದಕ್ಕಾಗಿ ಅವರ ಬಳಿ ಸಾಕಷ್ಟು ಹಣವಿರಲಿಲ್ಲ. ನಿರುದ್ಯೋಗಿಗಳ ಏಳಿಗೆಗಾಗಿ ಗಟ್ಟಿ ಮನಸ್ಸು ಮಾಡಿದ ನಿಚುಟೆ, ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು 'ಎಂಟರ್‌ಪ್ರೈಸರ್ಸ್ ಅಸೋಸಿಯೇಟ್ಸ್' (ಇಎ)ಎಂಬ ಸಂಸ್ಥೆಯನ್ನು ಕೇವಲ 7500 ರೂಪಾಯಿ ಬಂಡವಾಳದಲ್ಲಿ ಹುಟ್ಟುಹಾಕಿದರು.

ನಿರುದ್ಯೋಗಿಗಳಿಗೆ ಉದ್ಯಮ ಆರಂಭಿಸಲು ಕಡಿಮೆ ಬಡ್ಡಿ ದರದಲ್ಲಿ ಹಣಕಾಸು ನೆರವು ಒದಗಿಸುವುದು ಮತ್ತು ಕೌಶಲಾಭಿವೃದ್ಧಿ ತರಬೇತಿ ನೀಡುವುದು ಇಎ ಸಂಸ್ಥೆಯ ಮುಖ್ಯ ಕೆಲಸವಾಗಿದೆ. ನಾಗಾಲ್ಯಾಂಡ್ ಮತ್ತು ಮಣಿಪುರ ರಾಜ್ಯಗಳ 15 ಸಾವಿರಕ್ಕೂ ಹೆಚ್ಚು ಯುವಕರು ಈ ಸಂಸ್ಥೆಯಿಂದ ಹಣಕಾಸು ನೆರವು ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ಮಹಿಳೆಯರು ಮತ್ತು ಅಂಗವಿಕಲರಿಗೆ ಆದ್ಯತೆ ನೀಡುವ ಮೂಲಕ ಉದ್ಯಮಿಗಳಾಗುವಂತೆ ಡೌಲೊ ಪ್ರೇರೇಪಣೆ ನೀಡುತ್ತಿದ್ದಾರೆ.

## 64 ಮಂದಿಯ ಅವಿಭಕ್ತ ಮಾದರಿ ಕುಟುಂಬ

ಆಧುನಿಕ ಜೀವನಶೈಲಿಯಲ್ಲಿ ಅವಿಭಕ್ತ ಕುಟುಂಬಗಳು ಮರೆಯಾಗುತ್ತಿವೆ. ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ಗಂಡ–ಹೆಂಡತಿ ಜೊತೆಗೆ ಅತ್ತೆ–ಮಾವ ಇದ್ದರೆ ಅದೇ ಅವಿಭಕ್ತ ಕುಟುಂಬ ಎಂಬ ಸ್ಥಿತಿಗೆ ಮುಟ್ಟಿದ್ದೇವೆ. ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೇ ಗ್ರಾಮೀಣ ಪ್ರದೇಶಗಳಲ್ಲೂ ಇಂಥದ್ದೇ ಪರಿಸ್ಥಿತಿ. ಇಂತಹ ಸಂದರ್ಭದಲ್ಲಿ ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಹಳಗುಣಕಿ ಗ್ರಾಮದ ಕುಂಬಾರ ಮನೆತನದಲ್ಲಿ 64 ಮಂದಿ ಒಟ್ಟಾಗಿ ಬಾಳುತ್ತಿದ್ದು, ಅವರ ಬದುಕು ಇತರರಿಗೆ ಮಾದರಿಯೆನಿಸಿದೆ.

ಈ ಅವಿಭಕ್ತ ಕುಟುಂಬದ ಮೂಲ ಪುರುಷರು ಹಾಜಪ್ಪ ಕುಂಬಾರ. ಹಾಜಪ್ಪ ಹಾಗೂ ರೇವಮ್ಮ ದಂಪತಿಗೆ 6 ಗಂಡು ಹಾಗೂ 4 ಹೆಣ್ಣು ಸೇರಿ ಒಟ್ಟು 10 ಮಂದಿ ಮಕ್ಕಳು. ಗಂಡುಮಕ್ಕಳ ಪತ್ನಿಯರು, ಮಕ್ಕಳು, ಮೊಮ್ಮಕ್ಕಳು ಎಲ್ಲ ಸೇರಿ 64 ಜನ ಸದಸ್ಯರಿದ್ದಾರೆ. ಹೊಲದಲ್ಲಿಯೇ ಮನೆ ಕಟ್ಟಿಕೊಂಡು 50 ವರ್ಷಗಳಿಂದ ಒಗ್ಗಟ್ಟಿನ ಜೀವನ ನಡೆಸುತ್ತಿದ್ದಾರೆ. ಮನೆಯಲ್ಲಿ 25 ಬೃಹತ್ ಕೋಣೆಗಳಿವೆ. ಕುಟುಂಬದ ಹಿರಿಯರೇ ಪೊಲೀಸರು, ಅವರೇ ಕೋರ್ಟ್! 100 ಎಕರೆ ಜಮೀನಿನಲ್ಲಿ ಸುಮಾರು 70 ಎಕರೆ ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ನೀರು ಹೊಂದಿಸಲು ಹೊಂಡ ನಿರ್ಮಿಸಲಾಗಿದೆ. ಇದರಿಂದ ಪೈಪ್‌ಲೈನ್ ಮೂಲಕ ಜಮೀನಿಗೆ ನೀರು ಹರಿಸಲಾಗುತ್ತದೆ. ಕುಟುಂಬಕ್ಕೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಜಮೀನಿನಲ್ಲಿಯೇ ಬೆಳೆಯಲಾಗುತ್ತದೆ. ಕುಟುಂಬದ ಒಟ್ಟು ವಾರ್ಷಿಕ ಆದಾಯ ಸರಿಸುಮಾರು 60 ಲಕ್ಷ ರೂ.ಗಿಂತ ಅಧಿಕ. 12 ಎಮ್ಮೆ ಹಾಗೂ 4 ಆಕಳುಗಳಿವೆ. ಕೃಷಿ ಹೊರತಾಗಿ ಅಷ್ಟಾಗಿ ಹೊರಪ್ರಪಂಚದ ಅರಿವಿಲ್ಲದ ಈ ಕುಟುಂಬದವರಿಗೆ ಚಹಾ, ಸಾರಾಯಿ, ಗುಟಕಾ ವ್ಯಸನಗಳ ಸೋಂಕಿಲ್ಲ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

1-2-2017



# ಗೋಮಾಳ ಭೂಮಿ ಸಕ್ರಮಕ್ಕೆ ವಿಹಿಂಪ ವಿರೋಧ

ಗೋಮಾಳದ ಭೂಮಿ ಕಬಳಿಕೆ ಸಕ್ರಮ ಮಾಡುವ ರಾಜ್ಯ ಸರ್ಕಾರದ ಕ್ರಮವನ್ನು ವಿಶ್ವ ಹಿಂದು ಪರಿಷತ್ (ವಿಹಿಂಪ) ತೀವ್ರವಾಗಿ ಖಂಡಿಸಿದೆ. ಇದನ್ನು ಖಂಡಿಸಿ ಫೆ. 26ರಂದು ಪ್ರತಿಭಟನೆ ನಡೆಸಲು ವಿಹಿಂಪ ನಿರ್ಧರಿಸಿದೆ.

ಗೋಹತ್ಯೆ ನಿಷೇಧದ ಪ್ರಬಲ ಕಾಯ್ದೆಯನ್ನು ದುರ್ಬಲಗೊಳಿಸಿದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಇದೀಗ ಗೋಮಾಳ ಭೂಮಿಯನ್ನು ಅಕ್ರಮವಾಗಿ ಕಬಳಿಸಿದವರಿಗೆ ಸಕ್ರಮ ಮಾಡಿಕೊಡಲು ಮುಂದಾಗಿದೆ. ಇದರಿಂದ ಗೋಸಾಕಣೆದಾರರಿಗೆ ತೊಂದರೆಯಾಗಲಿದೆ. ಇದು ರಾಜ್ಯ ಸರ್ಕಾರದ ಹಿಂದೂ ವಿರೋಧಿ ಕೃತ್ಯವಾಗಿದೆ. ಸರ್ಕಾರದ ಈ ನಡೆಯನ್ನು ಖಂಡಿಸಿ ರಾಜ್ಯದ ವಿವಿಧ ಸಾಧುಸಂತರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ವಿಹಿಂಪನ ಪ್ರಾಂತ ಅಧ್ಯಕ್ಷ ಎಂ. ಬಿ. ಪುರಾಣಿಕ್ ತಿಳಿಸಿದರು. ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ಗೋಮಾಳವನ್ನು ಸಕ್ರಮ ಮಾಡಲು ನಿರ್ಧರಿಸಿತ್ತು.

# ಹಸುಗಳಿಗೂ ಆಧಾರ್ ಕಾರ್ಡ್!



ಹಾಲಿನ ಉತ್ಪಾದನೆ ಹೆಚ್ಚಿಸಲು ಹಾಗೂ ಜಾನುವಾರುಗಳ ಆರೋಗ್ಯದ ಮೇಲೆ ನಿಗಾ ಇಡುವ ಉದ್ದೇಶದಿಂದ ಹಸು, ಎಮ್ಮೆಗಳಿಗೆ ಆಧಾರ್ ಮಾದರಿ ಗುರುತಿನ ಚೀಟಿ ನೀಡುವ ಯೋಜನೆಯನ್ನು ಕೇಂದ್ರಸರ್ಕಾರ ಆರಂಭಿಸಿದೆ.

ಪಶುಸಂಗೋಪನೆ ಇಲಾಖೆಯ ಸಹಯೋಗದಲ್ಲಿ ನಡೆಯುವ ಈ ಯೋಜನೆಯನ್ನು ಜಾರಿಗೆ ತರಲು ದೇಶದಾದ್ಯಂತ ಒಂದು ಲಕ್ಷಕ್ಕೂ ಅಧಿಕ ತಂತ್ರಜ್ಞರನ್ನು ಕೇಂದ್ರ ಸರ್ಕಾರ ನೇಮಕ ಮಾಡಿಕೊಳ್ಳಲಿದೆ. ಈ ವರ್ಷಾಂತ್ಯದಲ್ಲಿ 8.8 ಕೋಟಿ ಹಸು ಹಾಗೂ ಎಮ್ಮೆಗಳಿಗೆ ಗುರುತಿನ ಚೀಟಿ ನೀಡುವ ಗುರಿ ಹೊಂದಲಾಗಿದೆ. 12 ಅಂಕಿಯಿರುವ ಹಳದಿ ಬಣ್ಣದ ಟ್ಯಾಗ್‌ನ್ನು ಪಶುಗಳ ಕಿವಿಗೆ ಅಳವಡಿಸಲಾಗುತ್ತದೆ. ಇದು ಅತ್ಯಂತ ಹಗುರವಾಗಿದ್ದು, ಪಶುಗಳ ತಳಿ, ನೀಡುವ ಹಾಲಿನ ಪ್ರಮಾಣ, ಆರೋಗ್ಯ ಸೇರಿದಂತೆ ಎಲ್ಲ ಮಾಹಿತಿ ಇರಲಿವೆ. ಆರೋಗ್ಯ ಕಾರ್ಡ್ ಕೂಡ ನೀಡಲಾಗುತ್ತದೆ. ಕಾಲಕಾಲಕ್ಕೆ ಸರ್ಕಾರಿ ಪಶುವೈದ್ಯರು ಗೋವುಗಳ ಆರೋಗ್ಯ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಿದ್ದಾರೆ. ಪ್ರತಿ ಟ್ಯಾಗ್‌ಗೆ 8 ರೂ. ವೆಚ್ಚವಾಗಲಿದೆ.

## ಕ್ರಿಶ್ಚಿಯನ್ ಕಾನೂನಿನ ವಿಚ್ಛೇದನಕ್ಕೆ ಮಾನ್ಯತೆಯಿಲ್ಲ

ಕ್ರಿಶ್ಚಿಯನ್ ವೈಯಕ್ತಿಕ ಕಾಯ್ದೆಯ ಅನುಸಾರ ಮಾನ್ಯ ಮಾಡಿದ ವಿಚ್ಛೇದನಗಳನ್ನು ಕಾನೂನುಬದ್ಧಗೊಳಿಸಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಕ್ರಿಶ್ಚಿಯನ್ ಕ್ಯಾನೋನ್ ಕಾನೂನು ಪ್ರಕಾರ ನೀಡಿದ ವಿಚ್ಛೇದನವನ್ನು (ಮುಸ್ಲಿಂ ಸಮುದಾಯದ ತಲಾಖ್ ಮಾದರಿಯಲ್ಲೇ) ಕಾನೂನುಬದ್ಧಗೊಳಿಸಬೇಕು ಎಂದು ಕೋರಿ ಕರ್ನಾಟಕ ಕ್ಯಾಥೋಲಿಕ್ ಸಂಘಟನೆಯ ಮಾಜಿ ಅಧ್ಯಕ್ಷ ಕ್ಲಾರೆನ್ಸ್ ಪಾಯಿಸ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾ. ಜೆ.ಎಸ್. ಖೇಹರ್ ನೇತೃತ್ವದ ತ್ರಿಸದಸ್ಯ ಪೀಠ, ಕ್ಯಾನೋನ್ ಕಾನೂನು ಸಮುದಾಯದ ಧಾರ್ಮಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದೆ. ದೇಶದಲ್ಲಿ ವಿಚ್ಛೇದನ ಕಾಯ್ದೆ ಜಾರಿಯಾದ ಮೇಲೆ, ವೈವಾಹಿಕ ಮುಂತಾದ ವೈಯಕ್ತಿಕ ಕಾಯ್ದೆಗಳು ಮಾನ್ಯತೆ ಕಳೆದುಕೊಂಡಿವೆ ಎಂದಿದೆ. ಕೇಂದ್ರ ಸರ್ಕಾರ ಕೂಡಾ ವಿಚ್ಛೇದನ ಕಾಯ್ದೆ 1869ರ ಮಾನ್ಯತೆಯನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ವಾದಿಸಿತ್ತು.

*1ನೇ ಪುಟದಿಂದ...*

# ಪಠ್ಯಪುಸ್ತಕ ಪರಿಷ್ಕರಣೆ : ಶಿಕ್ಷಣ ತಜ್ಞರ ವಿರೋಧ

ಕಡಿಮೆಯಿರುವುದರಿಂದ 2018–19ರಿಂದ ಮಾತ್ರ ಇದನ್ನು ಜಾರಿಗೆ ತರಲು ಸಾಧ್ಯ ಎನ್ನುವುದು ಶಿಕ್ಷಣ ಇಲಾಖೆಯ ಅಭಿಪ್ರಾಯ.

- ಪರಿಷ್ಕೃತ ಪಠ್ಯವನ್ನು ಸಮಿತಿ ಸಿದ್ಧಗೊಳಿಸಿದ ಮೇಲೆ ಅದನ್ನು ಹಾಗೆಯೇ ಜಾರಿಗೆ ತರಲು ಕಾನೂನಿನಲ್ಲಿ ಅವಕಾಶವಿಲ್ಲ. ಅದನ್ನು ಅವಲೋಕನ ಸಮಿತಿಯು ಪರಾಮರ್ಶಿಸಿ ತಿದ್ದುಪಡಿಯ ಅವಶ್ಯವಿದ್ದಲ್ಲಿ ಅದು ಪೂರ್ಣಗೊಂಡ ಬಳಿಕ ಮಾತ್ರ ಪಠ್ಯಪುಸ್ತಕವನ್ನು ಜಾರಿಗೊಳಿಸಲು ಸಾಧ್ಯ. ಆದರೆ, ಬರಗೂರು ಸಮಿತಿ ಅಸ್ತಿತ್ವಕ್ಕೆ ಬಂದ ಬಳಿಕ ಈ ಅವಲೋಕನ ಸಮಿತಿಯನ್ನು ರದ್ದುಗೊಳಿಸಲು ಸೂಚಿಸಿದ್ದರು ಎನ್ನಲಾಗಿದೆ.
- ಕಳೆದ ಬಾರಿಯ ಜಿ.ಎಸ್. ಮೂಡಂಬಡಿತ್ತಾಯ ನೇತೃತ್ವದ ಸಮಿತಿಯು ಹೊಸ ಪಠ್ಯಪುಸ್ತಕವನ್ನು ಜಾರಿಗೆ ತರುವ ಮುನ್ನ ಅವಲೋಕನ ಸಮಿತಿ ಮಾತ್ರವಲ್ಲದೇ, ಸಾರ್ವಜನಿಕರಿಂದಲೂ ಬಂದ ಸಲಹೆ ಸೂಚನೆಗಳನ್ನು ಪರಿಗಣನೆಗೆ ತೆಗೆದುಕೊಂಡಿತ್ತು. ಆದರೆ, ಈ ಬಾರಿ ಅದು ಯಾವುದೂ ಆಗುವ ಸಾಧ್ಯತೆಯಿಲ್ಲ. ಶಿಕ್ಷಕರೊಂದಿಗೂ ಚರ್ಚೆ ನಡೆಸಿಲ್ಲ. ಹಾಗೆಯೇ, ಹಿಂದಿನ ಪಠ್ಯಕ್ರಮದಲ್ಲಿದ್ದ ದೋಷಗಳೇನು, ಯಾವುದನ್ನು ಯಾಕಾಗಿ ಬದಲಾವಣೆ ಮಾಡುತ್ತಿದ್ದೇವೆ ಎನ್ನುವ ವಿವರಗಳನ್ನು ಶಿಕ್ಷಣ ಇಲಾಖೆಯ ಆಡಳಿತ ಮಂಡಳಿಗೆ ಸಮಿತಿ ನೀಡಬೇಕಿತ್ತು. ಆದರೆ, ಇದ್ಯಾವ ವಿವರಗಳನ್ನೂ ಸಮಿತಿ ನೀಡಿಲ್ಲ.
- ಕೇಂದ್ರ ಸರ್ಕಾರದ ಎನ್‌ಸಿಇಆರ್‌ಟಿ ಸಂಸ್ಥೆಯ ಮಾರ್ಗದರ್ಶಿ ಸೂತ್ರದ ಆಧಾರದ ಮೇಲೆಯೇ ಎಲ್ಲ ರಾಜ್ಯಗಳೂ ಪಠ್ಯಪುಸ್ತಕಗಳನ್ನು ರಚಿಸಬೇಕು. ಈಗಾಗಲೇ ಹೊಸ ಶಿಕ್ಷಣ ನೀತಿಯನ್ನು ಎನ್‌ಸಿಇಆರ್‌ಟಿ ಪ್ರಕಟಿಸಿದ್ದು, 2018–19 ರಿಂದ ಎಲ್ಲ ರಾಜ್ಯಗಳು ಇದಕ್ಕನುಗುಣವಾಗಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದು ಕಡ್ಡಾಯ. ಹಾಗಾಗಿ, ಈಗ ಬರಗೂರು ಸಮಿತಿಯ ಪರಿಷ್ಕೃತ ಪಠ್ಯವನ್ನು ಜಾರಿಗೊಳಿಸಿದರೂ ಅದು ಒಂದು ವರ್ಷಕ್ಕೆ ಮಾತ್ರ ಸೀಮಿತ.
- ಹಾಗೆಯೇ, ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಹಳೆಯ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹಾಗೂ ಕರ್ನಾಟಕ ಪಠ್ಯಕ್ರಮ ಚೌಕಟ್ಟಿನ ಆಧಾರದ ಮೇಲೆ ರಚಿತವಾಗಿರುವ ಈ ಪಠ್ಯಕ್ರಮ ಸಹಾಯಕವಲ್ಲ ಎನ್ನುವುದು ಶಿಕ್ಷಣ ತಜ್ಞರ ಅನಿಸಿಕೆ. ಹೀಗಿರುವಾಗ, ಇದು ಕೇವಲ ಪ್ರತಿಷ್ಠೆಯ ವಿಷಯವೇ ಹೊರತು ಬೇರೇನಿಲ್ಲ ಎನ್ನುವುದು ಸ್ಪಷ್ಟ. ಹೀಗಾಗಿ, ಮಕ್ಕಳಿಗೂ ಶಿಕ್ಷಕರಿಗೂ ಇಲಾಖೆಗೂ ಇದೊಂದು ಹೊರೆಯಷ್ಟೇ.
- ತರಾತುರಿಯಲ್ಲಿ ಬರಗೂರು ನೇತೃತ್ವದ ಸಮಿತಿ ಹಳೆಯ ಪಠ್ಯಪುಸ್ತಕದಲ್ಲಿನ ವಿಷಯಗಳನ್ನೇ ಅಲ್ಪಸ್ವಲ್ಪ ಬದಲಾವಣೆ ಮಾಡಿ ಪರಿಷ್ಕೃತ ಪಠ್ಯವೆಂದು ಸರ್ಕಾರಕ್ಕೆ ಸಲ್ಲಿಸಲು ಹೊರಟಿದೆ. ಸರ್ಕಾರ ಅದನ್ನೇ ಗಡಿಬಿಡಿಯಲ್ಲಿ ಮುದ್ರಣ ಮಾಡಲು ಸಿದ್ಧವಾಗಿರುವುದಕ್ಕೆ ಎಲ್ಲೆಡೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.
- ಅದರಲ್ಲಿ ಮಾಡಿರುವ ಬದಲಾವಣೆಗಳಾದರೂ ಎಂತಹವು? ಕೆಲವು ಉದಾಹರಣೆಗಳು ಇಲ್ಲಿವೆ. ಇದನ್ನು ನೋಡಿದಾಗ, ದೇಶಪ್ರೇಮ ಮತ್ತು ರಾಷ್ಟ್ರೀಯ ಭಾವನೆಗಳು ಮಕ್ಕಳಲ್ಲಿ ಬೆಳೆಯದಂತೆ, ಪರಸ್ಪರ ಭೇದ ಸೃಷ್ಟಿಯಾಗುವಂತೆ ಮಾಡಲು ಬರಗೂರು ಸಮಿತಿ ಹೊರಟಂತಿದೆ. ವಾಮಪಂಥೀಯರಿಂದಲೇ ತುಂಬಿರುವ ಸಮಿತಿ ತಮ್ಮ ಸಿದ್ಧಾಂತವನ್ನು ಪುಸ್ತಕದಲ್ಲಿ ತುರುಕಲು ಸನ್ನಾಹ ನಡೆಸಿರುವುದು ಸ್ಪಷ್ಟ.

  'ಭಾರತ ನಮ್ಮ ಮಾತೃಭೂಮಿ' ಎಂಬುದನ್ನು 'ಭಾರತ ನಮ್ಮ ದೇಶ' ಎಂದು ಬದಲಾವಣೆ ಮಾಡಿದೆ.

  ಆರ್ಯರ ಆಕ್ರಮಣ ಸಿದ್ಧಾಂತದ ಮೂಲಕ ಆರ್ಯ–ದ್ರಾವಿಡ ಭೇದವನ್ನು ಸೃಷ್ಟಿ ಮಾಡುತ್ತಿದ್ದ ಪಠ್ಯದ ಭಾಗ ಬಹಳ ಹಿಂದೆ ಇತ್ತು. ಇತ್ತೀಚಿನ ವೈಜ್ಞಾನಿಕ ಆಧಾರಗಳಿಂದ ಅದು ಆಧಾರರಹಿತವೆಂದು ಸಾಬೀತಾದ್ದರಿಂದ, ಜಿ. ಎಸ್. ಮೂಡಂಬಡಿತ್ತಾಯ ಸಮಿತಿ ಅದನ್ನು ತೆಗೆದುಹಾಕಿತು. ಬರಗೂರು ಸಮಿತಿಯ ಹೊಸ ಕರಡಿನಲ್ಲಿ ಈಗ ಮತ್ತೆ ಅದನ್ನೇ ಹಾಕಲಾಗಿದೆ.

  ದೇಶದ ಪ್ರಮುಖ ನೀರಾವರಿ ಯೋಜನೆಗಳ ಪಟ್ಟಿಯಲ್ಲಿ ಗುಜರಾತಿನ ನರ್ಮದಾ ಕಣಿವೆ ಯೋಜನೆಯ ಪ್ರಸ್ತಾಪವಿಲ್ಲ. ಪ್ರಮುಖ ಜಲವಿದ್ಯುತ್ ಯೋಜನೆಗಳಿರುವ ರಾಜ್ಯಗಳ ಪಟ್ಟಿಯಿಂದ ಗುಜರಾತ್‌ಅನ್ನು ಕೈಬಿಡಲಾಗಿದೆ.

  ಭರತ ಚಕ್ರವರ್ತಿಯಿಂದ ಭಾರತ ಎಂಬ ಹೆಸರು ಬಂತು ಎಂಬ ಉಲ್ಲೇಖವನ್ನು ಕೈಬಿಡಲಾಗಿದೆ. 'ಶಿವಾಲಿಕ್' ಬೆಟ್ಟ ಎಂದಿದ್ದುದನ್ನು 'ಸಿವಾಲಿಕ್' ಬೆಟ್ಟ ಎಂದು ತಿದ್ದುಪಡಿ ಮಾಡಲಾಗಿದೆ. ಹೀಗೇ, ಹಲವಾರು ಅನಗತ್ಯ ತಿದ್ದುಪಡಿಗಳಿವೆ.
- ಶಿಕ್ಷಾ ಬಚಾವೋ ಆಂದೋಲನ, ಮಾಧ್ಯಮಿಕ ಶಿಕ್ಷಕ ಸಂಘ, ಬಿಜೆಪಿ, ಎಬಿವಿಪಿ ಮೊದಲಾದ ಸಂಘಟನೆಗಳು ರಾಜ್ಯ ಸರ್ಕಾರದ ಈ ದುರುದ್ದೇಶಪೂರಿತ ಕ್ರಮವನ್ನು ವಿರೋಧಿಸಿ, ರಾಜ್ಯಪಾಲರಿಗೆ ದೂರು ನೀಡಿವೆ. ಅಲ್ಲದೇ, ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್ ಅವರಿಗೂ ದೂರು ನೀಡಿವೆ. ಈಗಾಗಲೇ, ಎನ್‌ಸಿಇಆರ್‌ಟಿ ರಾಜ್ಯ ಸರ್ಕಾರದಿಂದ ಈ ಬಗ್ಗೆ ವಿವರಣೆ ಕೇಳಿದೆ. ರಾಜ್ಯ ಸರ್ಕಾರದ ಕ್ರಮ ಸರಿಯಲ್ಲವೆಂದು ಮನವರಿಕೆಯಾದರೆ, ಹೊಸ ಪಠ್ಯಕ್ರಮದ ಜಾರಿಗೆ ಅದು ತಡೆಯೊಡ್ಡುವ ಸಾಧ್ಯತೆಯಿದೆ.
- ಎಲ್ಲ ದೇಶಪ್ರೇಮಿಗಳು, ಪೋಷಕರು ರಾಜ್ಯ ಸರ್ಕಾರದ ಈ ಕ್ರಮವನ್ನು ವಿರೋಧಿಸಿ, ಈಗಿರುವ ಪಠ್ಯಪುಸ್ತಕದಲ್ಲಿ ಯಾವುದೇ ಬದಲಾವಣೆ ಮಾಡದಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕಾದ ಅಗತ್ಯವಿದೆ.

# ಪಂಡಿತರಿಗೆ ಜಮ್ಮು–ಕಾಶ್ಮೀರಕ್ಕೆ ಮರಳಲು ಸೂಕ್ತ ವಾತಾವರಣ : ವಿಧಾನಸಭೆ ನಿರ್ಣಯ




ಪ್ರತ್ಯೇಕತಾವಾದಿಗಳ ಕಿರುಕುಳ ಹಾಗೂ ಉಗ್ರವಾದಿಗಳ ಅಟ್ಟಹಾಸದಿಂದಾಗಿ ಕಾಶ್ಮೀರ ತೊರೆದ ಪಂಡಿತರಿಗೆ ತವರುನೆಲದಲ್ಲಿ ಮರಳಿ ನೆಲೆಸುವುದಕ್ಕೆ ಅನುಕೂಲವಾಗುವಂತಹ ವಾತಾವರಣ ರೂಪಿಸುವ ಸಂಬಂಧ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಸರ್ವಾನುಮತದ ನಿರ್ಣಯವೊಂದನ್ನು ಕೈಗೊಂಡಿದೆ.

1990ರ ಜನವರಿಯಲ್ಲಿ ಪ್ರತ್ಯೇಕತಾವಾದಿಗಳು ಹಾಗೂ ಉಗ್ರವಾದಿಗಳಿಂದ ಕಾಶ್ಮೀರ ಬಿಟ್ಟು ತೊಲಗಿ ಅಥವಾ ಹತ್ಯೆಗೆ ಬಲಿಯಾಗಿ ಎಂಬ ಬೆದರಿಕೆ ಹಾಗೂ ಹಿಂದು ಮುಖಂಡರು, ಅಧಿಕಾರಿಗಳ ಹತ್ಯೆ, ಮಕ್ಕಳ ಮೇಲೆ ಅಮಾನುಷ ಹಲ್ಲೆ ಮತ್ತು ಮಹಿಳೆಯರ ಮೇಲೆ ಸಾಮೂಹಿಕ ಬಲಾತ್ಕಾರ ನಡೆಯಿತು. ಈ ಬೆಳವಣಿಗೆಯಿಂದ ಕಂಗೆಟ್ಟ ಸುಮಾರು 2 ರಿಂದ 3.5 ಲಕ್ಷ ಹಿಂದುಗಳು ಅಲ್ಲಿಂದ ಪಲಾಯನಮಾಡಿ, ದೇಶದ ವಿವಿಧ ಭಾಗಗಳಲ್ಲಿ ಜೋಪಡಿಗಳಲ್ಲಿ ನೆಲೆಸಿದರು. ಉಗ್ರರು ಮತ್ತು ಪ್ರತ್ಯೇಕತಾವಾದಿಗಳ ಅಟ್ಟಹಾಸಕ್ಕೆ ಸಾಕ್ಷಿಯಾದ ಈ ವಿದ್ಯಮಾನದ ನಂತರ ಕಾಶ್ಮೀರಿ ಪಂಡಿತರು ಮರಳಲು ಇಚ್ಚಿಸಿದರೂ ಅದಕ್ಕೆ ಪೂರಕ ವಾತಾವರಣವಿರಲಿಲ್ಲ. ಇದೀಗ 27 ವರ್ಷಗಳ ನಂತರ ಜಮ್ಮು–ಕಾಶ್ಮೀರ ಸರ್ಕಾರ ಸಕಾರಾತ್ಮಕ ಹೆಜ್ಜೆಯನ್ನಿಟ್ಟಿದೆ. ವಾಪಸಾಗುವವರಲ್ಲಿ ಪಂಡಿತರು ಮಾತ್ರವಲ್ಲದೆ ಸಿಖ್ಖರೂ ಸೇರಿದ್ದಾರೆ. ಹೀಗೆ ವಾಪಸಾಗುವವರಿಗೆ ವಾಸಕ್ಕೆ ಜಮ್ಮು–ಕಾಶ್ಮೀರ ಸರ್ಕಾರ ಪ್ರತ್ಯೇಕ ಟೌನ್‌ಷಿಪ್ ನಿರ್ಮಿಸಲಿದೆ. ಮೂರು ವರ್ಷದ ನಂತರ ರಾಜ್ಯದ ಯಾವುದೇ ಭಾಗದಲ್ಲಿ ವಾಸಿಸಲು ಅವರು ಸ್ವತಂತ್ರರಾಗಿರುತ್ತಾರೆ ಎನ್ನಲಾಗಿದೆ. ಸ್ಪೀಕರ್ ಕವೀಂದರ್ ಗುಪ್ತ ಮಂಡಿಸಿದ ಈ ನಿರ್ಣಯವು ಧ್ವನಿಮತದ ಮೂಲಕ ಸರ್ವಾನುಮತದಿಂದ ಅಂಗೀಕಾರಗೊಂಡಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: **ಪುಂಗವ,** #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.